ಮುಂಜಾನೆ ಮಾತು

ವಸ್ತುಗಳನ್ನು ಸರಿಯಾಗಿ ಉಪಯೋಗಿಸಬೇಕು ಜನರನ್ನಲ್ಲ. ಜನರನ್ನು ಪ್ರೀತಿಸಬೇಕು ವಸ್ತುಗಳನ್ನಲ್ಲ. ಸುಖ ಜೀವನಕ್ಕೆ ಸಹಕಾರಿಯಾಗಬಲ್ಲ ಈ ಅಂಶಗಳತ್ತ ಗಮನಿಸೋಣ.

ವಿಜಯವಾಣಿ

ಕನ್ನಡಿಗರ ಧ್ವನಿ

ನಂ. 1* ಕನ್ನಡ ದಿನಪತ್ರಿಕೆ

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI ● MANGALURU ಮಂಗಳೂರು ● ಸಂಪುಟ 7 ● ಸಂಚಿಕೆ 9

vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682 9 ಏಪ್ರಿಲ್ 2018 | ಸೋಮವಾರ



CENTRAL LIBRARY

# 200 ಇಂಜಿನಿಯರಿಂಗ್ ಕಾಲೇಜು ಬಂದ್

## ಶೈಕ್ಷಣಿಕ ಮಾನದಂಡದ ಕೊರತೆ ಕಾರಣ | ಎಐಸಿಟಿಇ ಮಹತ್ವದ ನಿರ್ಣಯ

ನವದೆಹಲಿ: ಗುಣಮಟ್ಟದ ಕೊರತೆ ಮತ್ತು ಸೀಟುಗಳು ಖಾಲಿ ಉಳಿಯುತ್ತಿರುವ ಕಾರಣ ದೇಶಾದ್ಯಂತ ಅಂದಾಜು 200 ಇಂಜಿನಿಯರಿಂಗ್ ಕಾಲೇಜುಗಳನ್ನು ಮುಂದಿನ ಒಂದು ವರ್ಷದ ಅವಧಿಯಲ್ಲಿ ಮುಚ್ಚಲು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ನಿರ್ಧರಿಸಿದೆ. ಶೈಕ್ಷಣಿಕ ಮಾನದಂಡ ಮತ್ತು ನಿಯಮಗಳನ್ನು ಅನುಸರಿಸಿದ ಇಂತಹ ಕಾಲೇಜುಗಳಿಗೆ 2018-19ನೇ ಸಾಲಿನ ಪ್ರವೇಶಾತಿ ನಡೆಸದಂತೆ ಸೂಚಿಸಿದೆ. ಇದರಿಂದ ದೇಶಾದ್ಯಂತ ಒಟ್ಟಾರೆ 80 ಸಾವಿರ ಇಂನಿಯರಿಂಗ್ ಸೀಟುಗಳು ಕಡಿತವಾಗಲಿವೆ.

| ವರ್ಷ | ಮುಚ್ಚಿದ ಕಾಲೇಜುಗಳು |
|---|---|
| 2014-2015 | 77 |
| 2015-2016 | 125 |
| 2016-2017 | 149 |
| 2017-2018 | 65 |
| 2017-2018 | 200 (ಅಂದಾಜು) |

2022ರ ಹೊತ್ತಿಗೆ ಇಂಜಿನಿಯರಿಂಗ್ ಕಾಲೇಜುಗಳು ಒದಗಿಸುವ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಕನಿಷ್ಠ ಶೇ.50ರಷ್ಟಕ್ಕೆ ರಾಷ್ಟ್ರೀಯ ಮಾನ್ಯತಾ ಮಂಡಳಿಯಿಂದ (ಎನ್‌ಬಿಎ) ಕಡ್ಡಾಯವಾಗಿ ಮಾನ್ಯತೆ ಪಡೆಯಬೇಕು ಎಂಬ ನಿಯಮ ಜಾರಿಗೆ ತರಲು ಎಐಸಿಟಿಇ ನಿರ್ಧರಿಸಿದೆ. ಪ್ರಸ್ತುತ ಶೇ. 10ರಷ್ಟು ಶೈಕ್ಷಣಿಕ ಕಾರ್ಯಕ್ರಮಗಳಿಗೆ ಮಾತ್ರ ಮಾನ್ಯತೆ ಪಡೆಯುತ್ತಿವೆ.

**ಪ್ರತಿವರ್ಷ ಸರಾಸರಿ 75 ಸಾವಿರ ಸೀಟು ಕಡಿತ:** ಕೆಲವು ಶಿಕ್ಷಣ ಸಂಸ್ಥೆಗಳ ಪರಿಸ್ಥಿತಿ ಅತ್ಯಂತ ಕೆಟ್ಟದಾಗಿದ್ದು, ಅವು ಸ್ವಯಂಪ್ರೇರಿತವಾಗಿ ಇಂಜಿನಿಯರಿಂಗ್ ಕೋರ್ಸ್ ಸ್ಥಗಿತಕ್ಕೆ ಅನುಮತಿ ಕೋರಿವೆ. ಇದೇ ವೇಳೆಗೆ ಪ್ರತಿಷ್ಠಿತ ತಾಂತ್ರಿಕ ಶಿಕ್ಷಣ ಸಂಸ್ಥೆಗಳಾದ ಐಐಟಿ ಮತ್ತು ಎನ್‌ಐಟಿಗಳಲ್ಲಿ ಪ್ರವೇಶಾತಿ ಹೆಚ್ಚಳವಾಗಿರುವುದು ಸಹ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟು ಖಾಲಿ ಉಳಿಯಲು ಕಾರಣವಾಗಿದೆ.

ಕಳೆದ ನಾಲ್ಕು ವರ್ಷಗಳಿಂದೀಚೆಗೆ 3.10 ಲಕ್ಷಕ್ಕೆ ಇಂಜಿನಿಯರಿಂಗ್ ಸೀಟು ತಗ್ಗಿದ್ದು, 2012-2013ನೇ ಸಾಲಿನಲ್ಲೇ 1.85 ಲಕ್ಷ ಸೀಟುಗಳು ಖಾಲಿ ಉಳಿದಿದ್ದವು. ನಂತರ ವರ್ಷಗಳಲ್ಲಿ ಪ್ರವೇಶಾತಿ ಸಂಖ್ಯೆ ಗಣನೀಯವಾಗಿ ಕಡಿಮೆ ಆಯಿತು. 2016ರಿಂದೀಚೆಗೆ ಪ್ರತಿ ವರ್ಷ ಸರಾಸರಿ 75,000 ಸೀಟುಗಳು ಕಡಿತವಾಗುತ್ತಿವೆ. ಈ ಸಾಲಿನಲ್ಲಿ ಪದವಿ ಹಂತದ ಇಂಜಿನಿಯರಿಂಗ್ ಕೋರ್ಸ್‌ಗಳಲ್ಲಿ 15,71,220 ಒಟ್ಟಾರೆ ಸೀಟುಗಳಿಗೆ ಪ್ರವೇಶಾತಿ ಆಗಿದ್ದೆ 7,87,127. 2015-16ನೇ ಸಾಲಿನಲ್ಲಿ ಇದರ ಅನುಪಾತ 16,47,155 ಸೀಟುಗಳಲ್ಲಿ 8,60,357 ಪ್ರವೇಶಾತಿ ನಡೆದಿತ್ತು.

2016-17ನೇ ಸಾಲಿನಲ್ಲಿ ದೇಶಾದ್ಯಂತ 3,415 ಶಿಕ್ಷಣ ಸಂಸ್ಥೆಗಳು ಪದವಿ ಹಂತದ ಆರ್ಕಿಟೆಕ್ಚರ್ ಮತ್ತು ಇಂಜಿನಿಯರಿಂಗ್ ಕೋರ್ಸ್‌ಗಳನ್ನು ಬೋಧಿಸುತ್ತಿದ್ದು, ಇವುಗಳಲ್ಲಿ ಅಂದಾಜು 50 ಇಂಜಿನಿಯರಿಂಗ್ ಕಾಲೇಜುಗಳು ಮುಚ್ಚಲ್ಪಟ್ಟಿವೆ. ಎಐಸಿಟಿಇ ಪ್ರಕಾರ ಸುಮಾರು 800 ಇಂಜಿನಿಯರಿಂಗ್ ಕಾಲೇಜುಗಳು ಮುಚ್ಚುತ್ತವೆ. ಇದರಲ್ಲಿ 2014-2015ರಿಂದ 2017-18ನೇ ಸಾಲಿನಲ್ಲಿ 410 ಕಾಲೇಜುಗಳಿಗೆ ಹೊಸದಾಗಿ ಪ್ರವೇಶಾತಿ ನಡೆಸದಂತೆ ಎಐಸಿಟಿಇ ಸೂಚಿಸಿತ್ತು -ಏಜೆನ್ಸೀಸ್

ಸೋಮವಾರ, 9 ಏಪ್ರಿಲ್ 2018 | ಪುಟಗಳು: 14+4 | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 253
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ |



ಇನ್‌ಸ್ಟಾಗ್ರಾಂ ಖಾತೆ ತೆರೆದ ಕೆಲವೇ ದಿನದಲ್ಲಿ ನಟ ಸುದೀಪ್‌ಗೆ 10 ಲಕ್ಷ ಫಾಲೋವರ್‌ಗಳು!

ಪತಂಜಲಿ ರಾಮ್‌ದೇವ್ ಕಂಪನಿ ಟ್ರೇಡ್‌ಮಾರ್ಕ್: ಅನ್ಯರು ಬಳಸದಂತೆ ನಾಲ್ಕು ಸಂಸ್ಥೆಗಳಿಗೆ ದಿಲ್ಲಿ ಹೈಕೋರ್ಟ್ ಸೂಚನೆ

500ಕ್ಕೂ ಅಧಿಕ ಐಪಿಎಸ್ ಅಧಿಕಾರಿಗಳು ಆಸ್ತಿ ವಿವರ ಸಲ್ಲಿಸಲು ವಿಫಲ: ಬಡ್ತಿಗೆ ಕಂಟಕ ಸಾಧ್ಯತೆ

# 80,000 ಎಂಜಿನಿಯರಿಂಗ್ ಸೀಟು ಖೋತಾ

**ಟಿಒಐ** ಹೊಸದಿಲ್ಲಿ

ಎಂಜಿನಿಯರಿಂಗ್ ಶಿಕ್ಷಣ ತನ್ನ ಈ ಹಿಂದಿನ ಮೆರಗು ಕಳೆದುಕೊಳ್ಳುತ್ತಿರುವಾಗಲೇ, ಮುಂಬರುವ ಶೈಕ್ಷಣಿಕ ವರ್ಷದಲ್ಲಿ 80,000 ಎಂಜಿನಿಯರಿಂಗ್ ಸೀಟುಗಳು ಖೋತಾ ಆಗಲಿವೆ ಎನ್ನುವ ಮಾಹಿತಿ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ(ಎಐಸಿಟಿಇ)ಯಿಂದ ಹೊರ ಬಿದ್ದಿದೆ.

ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸೀಟುಗಳು ಕಡಿತಗೊಳ್ಳುತ್ತಿರುವುದರ ಹಿಂದೆ ಹಲವು ಕಾರಣಗಳು ಕಾಣಿಸಿವೆ. ವಾಸ್ತವವಾಗಿ ಬಿ ಇ ಪದವಿ ಆಕಾಂಕ್ಷಿಗಳ ಸಂಖ್ಯೆಯೇ ಇಳಿಮುಖಗೊಂಡಿದೆ. 2012-13ರ ಸಾಲಿನಿಂದ ಈವರೆಗೆ ಪ್ರವೇಶಾತಿ 1.86 ಲಕ್ಷದಷ್ಟು ಕುಸಿದಿದೆ.

ಈಗಾಗಲೇ ಮೂಲಸೌಕರ್ಯವಿಲ್ಲದ 200 ಎಂಜಿನಿಯರಿಂಗ್ ಕಾಲೇಜುಗಳು ಮುಚ್ಚಲು ಅನುಮತಿ ಕೋರಿ ಅರ್ಜಿ ಸಲ್ಲಿಸಿವೆ ಎಂದು ಎಐಸಿಟಿಇ ತಿಳಿಸಿದೆ. ಈ ಕಾಲೇಜುಗಳು ಹೊಸದಾಗಿ ಯಾವುದೇ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುತ್ತಿಲ್ಲ, ಆದರೆ ಹಳೆಯ ಬ್ಯಾಚ್‌ನ ವಿದ್ಯಾರ್ಥಿಗಳ ಕೋರ್ಸ್ ಮುಗಿಯಲು ಅನುವುಮಾಡಿಕೊಡಬೇಕಾದ ಅನಿವಾರ್ಯತೆಯಿಂದ ಸದ್ಯಕ್ಕೆ ಕಾರ್ಯನಿರ್ವಹಿಸುತ್ತಿವೆ.

ಒಟ್ಟಾರೆ ಎಂಜಿನಿಯರಿಂಗ್ ದಾಖಲಾತಿಯಲ್ಲಿ ಇಳಿಕೆ ಕಾಣಿಸಿದ್ದರೂ ಪ್ರತಿಷ್ಠಿತ ಸಂಸ್ಥೆಗಳಲ್ಲಿನ ಬೇಡಿಕೆ ಮಾತ್ರ ಯಥಾಸ್ಥಿತಿ ಏರಿಕೆಯ ಹಾದಿಯಲ್ಲಿದೆ. ಇಂಡಿಯನ್ ಇನ್‌ಸ್ಟಿಟ್ಯೂಟ್ಸ್ ಆಫ್ ಟೆಕ್ನಾಲಜಿ (ಐಐಟಿ) ಅಥವಾ ನ್ಯಾಷನಲ್ ಇನ್‌ಸ್ಟಿಟ್ಯೂಟ್ಸ್ ಆಫ್ ಟೆಕ್ನಾಲಜಿ (ಎನ್‌ಐಟಿ)ಯಂತಹ ಸಂಸ್ಥೆಗಳ ಪ್ರವೇಶ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಲೇ ಇದೆ.

ಏತನ್ಮಧ್ಯೆ, ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಇರುವ ಎಲ್ಲ ಪ್ರೋಗ್ರಾಮ್‌ಗಳಿಗೆ ರಾಷ್ಟ್ರೀಯ ಮಾನ್ಯತಾ ಮಂಡಳಿ(ಎನ್‌ಬಿಎ)ಯ ಸಮ್ಮತಿ ಪತ್ರ ಕಡ್ಡಾಯಗೊಳಿಸುವ ಪ್ರಕ್ರಿಯೆಯನ್ನೂ ಎಐಸಿಟಿಇ ಚುರುಕುಗೊಳಿಸಿದೆ. 2022ರ ವೇಳೆಗೆ ದೇಶದ ಶೇ.50ರಷ್ಟು ಪ್ರೋಗ್ರಾಮ್‌ಗಳಿಗೆ ಎನ್‌ಬಿಎ ಮಾನ್ಯತೆ ನೀಡುವ ಗುರಿ ಹೊಂದಲಾಗಿದೆ ಎಂದು ಎಐಸಿಟಿಇ ತಿಳಿಸಿದೆ. ಪ್ರಸ್ತುತ ಶೇ.10ರಷ್ಟು ಪ್ರೋಗ್ರಾಮ್‌ಗಳು ಮಾತ್ರ ಮಾನ್ಯತೆ ಪಡೆದಿವೆ.

**ಪ್ರತಿ ವರ್ಷ ಕುಸಿತ:** 2016ರಿಂದ ಎಂಜಿನಿಯರಿಂಗ್ ಶಿಕ್ಷಣದ ಆಕರ್ಷಣೆ ಕುಂದುತ್ತಲೇ ಬಂದಿದೆ. ಪ್ರತಿ ವರ್ಷ ಸರಾಸರಿ 75,000 ಸೀಟುಗಳು ಕಡಿಮೆಯಾಗುತ್ತಿವೆ. 2016-17ರ ಸಾಲಿನಲ್ಲಿ ಲಭ್ಯ ಇದ್ದ ಒಟ್ಟು ಸೀಟುಗಳು 15,71,2250. ಈ ಪೈಕಿ ಭರ್ತಿಯಾದದ್ದು 7,87,127 ಸೀಟು ಮಾತ್ರ. ಶೇ.50.1ರಷ್ಟು ಖೋತ ದಾಖಲಾಗಿದೆ. ಇದರ ಹಿಂದಿನ ವರ್ಷ ಕೂಡ ಶೇ.52 ರಷ್ಟು ಸೀಟುಗಳು ಖಾಲಿ ಉಳಿದಿವೆ. ''ಈ ವರ್ಷವೂ ಸುಮಾರು 80,000 ಸೀಟುಗಳು ಕಡಿಮೆಯಾಗಲಿವೆ,'' ಎಂದು ಎಐಸಿಟಿಇ ಮುಖ್ಯಸ್ಥ ಅನಿಲ್ ಸಹಸ್ರಬುಧೆ ಹೇಳಿದ್ದಾರೆ.

## ದಾಖಲಾತಿ ಮತ್ತು ಖಾಲಿ ಸೀಟುಗಳು

**ಕುಸಿಯುತ್ತಲೇ ಇರುವ ಎಂಜಿನಿಯರಿಂಗ್ ಶಿಕ್ಷಣಾಕಾಂಕ್ಷಿಗಳ ಪ್ರಮಾಣ...**




**ಐಐಟಿ ಮತ್ತು ಎನ್‌ಐಟಿ ಸಂಸ್ಥೆಗಳ ಪ್ರವೇಶಾತಿಯಲ್ಲಿ ಏರಿಕೆ**

- **2016-17ರ ಸಾಲಿನಲ್ಲ ಐಐಟಿಯಲ್ಲಿ 900 ಸೀಟುಗಳು ಹೆಚ್ಚಳ.**
- **2018-19ರ ಸಾಲಿಗೆ ಐಐಟಿಯಲ್ಲಿ ಮಹಿಳಾ ಅಭ್ಯರ್ಥಿಗಳಿಗಾಗಿ ಇನ್ನೂ 700 ಸೀಟು ಹೆಚ್ಚಳ.**
- **2018-19ರ ಸಾಲಿಗೆ ಎನ್ ಐಟಿಯಲ್ಲಿ 1000 ಸೀಟುಗಳು ಹೆಚ್ಚಳ.**